ಕರ್ನಾಟಕ ಶಿಕ್ಷಣ ಇಲಾಖೆ

ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕಾರ ಪರಿಷತ್ತು

**Karnataka School Quality Assessment & Accreditation Council**

ಕೆ.ಎಸ್.ಇ.ಇ.ಬಿ. ಹಳೇ ಕಟ್ಟಡ, ಮಲ್ಲೇಶ್ವರಂ, ಬೆಂಗಳೂರು-03 ದೂರವಾಣಿ ಸಂಖ್ಯೆ 23341615, 23562283, 29720300
ಫ್ಯಾಕ್ಸ್: 080-23347670, e-mail: ksqaacbangalore@gmail.com & ksqaacbengaluru@gmail.com

ಸಂಖ್ಯೆ:ಸಿ1/ಕೆ.ಎಸ್.ಕ್ಯೂ.ಎ.ಎ.ಸಿ/7ನೇ ತ. ಮೌಲ್ಯಾಂಕನ ವೇಳಾ/66/2019-20 ದಿನಾಂಕ:14.02.2020

## ಜ್ಞಾಪನ

ವಿಷಯ:- 7 ನೇ ತರಗತಿ ಸಾಮಾನ್ಯ ಮೌಲ್ಯಾಂಕನದ ವೇಳಾಪಟ್ಟಿ ಬದಲಾವಣೆ ಕುರಿತು.

ಉಲ್ಲೇಖ:- 1. ಸರ್ಕಾರದ ಪತ್ರ ಸಂಖ್ಯೆ ಇಡಿ311, [illegible] 2019 ಬೆಂಗಳೂರು, ದಿನಾಂಕ:07.02.2020

2. ಈ ಕಛೇರಿ ಸುತ್ತೋಲೆ ಸಂಖ್ಯೆ ಸಿ1/ಕೆ.ಎಸ್.ಕ್ಯೂ.ಎ.ಎ.ಸಿ/7ನೇ ತ. ಮೌಲ್ಯಾಂಕನ ವೇಳಾ/64/2019-20

-*-*-*-

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2019-20ನೇ ಸಾಲಿನಲ್ಲಿ ರಾಜ್ಯ ಪಠ್ಯ ಕ್ರಮ ಅನುಸರಿಸುತ್ತಿರುವ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಮೊರಾರ್ಜಿ ದೇಸಾಯಿ ಶಾಲೆಗಳನ್ನೊಳಗೊಂಡಂತೆ ಎಲ್ಲಾ ವಸತಿ ಶಾಲೆಗಳು ಮತ್ತು ಅನುದಾನ ರಹಿತ ಶಾಲೆಗಳ 7ನೇ ತರಗತಿ ವಿದ್ಯಾರ್ಥಿಗಳಿಗೆ "ಸಾಮಾನ್ಯ ಮೌಲ್ಯಾಂಕನ"ವನ್ನು ದಿನಾಂಕ: 09.03.2020 ರಿಂದ 14.03.2020 ರವರೆಗೆ ನಡೆಸಲಾಗುವುದಾಗಿ ತಿಳಿಸಲಾಗಿತ್ತು. ಅನಿವಾರ್ಯ ಕಾರಣಗಳಿಂದ ಸದರಿ ಮೌಲ್ಯಾಂಕನವನ್ನು ಮುಂದೂಡಲಾಗಿದ್ದು, ಪರಿಷ್ಕೃತ ವೇಳಾಪಟ್ಟಿ ಈ ಕೆಳಗಿನಂತಿದೆ.

| ಕ್ರ.ಸಂ. | ವಿಷಯ | ದಿನಾಂಕ/ ವಾರ | ಸಮಯ |
|---|---|---|---|
| 01 | ಪ್ರಥಮ ಭಾಷೆ | 16.03.2020 - ಸೋಮವಾರ | ಬೆಳಗ್ಗೆ 10.30 ರಿಂದ 12.00 ರವರೆಗೆ |
| 02 | ದ್ವಿತೀಯ ಭಾಷೆ | 17.03.2020 - ಮಂಗಳವಾರ | ಬೆಳಗ್ಗೆ 10.30 ರಿಂದ 12.00 ರವರೆಗೆ |
| 03 | ತೃತೀಯ ಭಾಷೆ | 18.03.2020 - ಬುಧವಾರ | ಬೆಳಗ್ಗೆ 10.30 ರಿಂದ 12.00 ರವರೆಗೆ |
| 04 | ಗಣಿತ | 19.03.2020 - ಗುರುವಾರ | ಬೆಳಗ್ಗೆ 10.30 ರಿಂದ 12.00 ರವರೆಗೆ |
| 05 | ವಿಜ್ಞಾನ | 20.03.2020 - ಶುಕ್ರವಾರ | ಬೆಳಗ್ಗೆ 10.30 ರಿಂದ 12.00 ರವರೆಗೆ |
| 06 | ಸಮಾಜ ವಿಜ್ಞಾನ | 21.03.2020 - ಶನಿವಾರ | ಬೆಳಗ್ಗೆ 10.30 ರಿಂದ 12.00 ರವರೆಗೆ |

(ದೈಹಿಕ ಶಿಕ್ಷಣ ವಿಷಯದ ಪರೀಕ್ಷೆಯನ್ನು ದಿನಾಂಕ: 23.03.2020 ರಂದು ಶಾಲಾ ಹಂತದಲ್ಲಿಯೇ ಕೈಗೊಳ್ಳುವುದು.)

ಉಳಿದಂತೆ ಮೌಲ್ಯಾಂಕನ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಉಲ್ಲೇಖ (2) ರ ಸುತ್ತೋಲೆಯಲ್ಲಿ ತಿಳಿಸಿರುವಂತೆ ಮೌಲ್ಯಾಂಕನವನ್ನು ಕೈಗೊಂಡು ಯಶಸ್ವಿಗೊಳಿಸಲು ಈ ಮೂಲಕ ತಿಳಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯೂ.ಎ.ಎ.ಸಿ.

ಪ್ರತಿಯನ್ನು:-

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಬ್ಲಾಕ್‌ಗಳ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಎಲ್ಲಾ ಸರ್ಕಾರಿ, ಅನುದಾನಿತ, ಮೊರಾರ್ಜಿ ದೇಸಾಯಿ ಶಾಲೆಗಳನ್ನೊಳಗೊಂಡಂತೆ ಎಲ್ಲಾ ವಸತಿ ಶಾಲೆಗಳ ಮತ್ತು ಅನುದಾನ ರಹಿತ ಶಾಲೆಗಳ ಮುಖ್ಯ ಶಿಕ್ಷಕರಿಗೆ ಸೂಕ್ತ ಕ್ರಮಕ್ಕಾಗಿ (ಕ್ಷೇತ್ರಶಿಕ್ಷಣಾಧಿಕಾರಿಗಳ ಮೂಲಕ)
5. ಕಛೇರಿ ಪ್ರತಿ.